c) What is the amount released so to the prjects in Cauvery Basin; (Zonal -wise information be furnished)

d) What is the total amount required for completing the balanced work in Cauvery Basin?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು)

a) ರೂ. 14762.83 ಲಕ್ಷಗಳ ಬಾಕಿ ಬಿಲ್ಲುಗಳು ಪಾವತಿಗಾಗಿ ಉಳಿದಿರುತ್ತದೆ. ವಲಯವಾರು ವಿವರಗಳು ಈ ಕೆಳಕಂಡಂತಿವೆ.

b) ಹೌದು

c) ಈವರೆವಿಗೂ ರೂ. 13153.60 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಲಯವಾರು ವಿವರಗಳು ಈ ಕೆಳಕಂಡಂತಿವೆ.

d) ಸದರಿ ಯೋಜನೆಯನ್ನು ಪೂರ್ಣಗೊಳಿಸಲು ರು. 3022. 16 ಕೋಟಿಗಳು ಬೇಕಾಗಿರುತ್ತದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳು ಆಹಾರ ಧಾನ್ಯಗಳ ವಿತರಣೆ ಮಾಡದೆ ಇರುವುದು

1192 (1335) ಶ್ರೀ ಚೌಡ ರೆಡ್ಡಿ (ಚಿಂತಾಮಣಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಎಂ.ಗೊಲ್ಲಹಳ್ಳಿ ಮುಂಗಾನಹಳ್ಳಿ ಹೋಬಳಿ, ಚೂನಹುಡ್ಯ, ಮುರಗಮಲ್ಲ ಹೋಬಳಿ, ದೊಡ್ಡಹಳ್ಳಿ, ಅಮಬಾಜಿದುರ್ಗ ಹೋಬಳಿಯಲ್ಲಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಆರು ತಿಂಗಳಿಂದ ಆಹಾರ ಧಾನ್ಯಗಳನ್ನು ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು)

ಅ) ಬಂದಿದೆ

ಆ) ಈ ಮೂರು ಗ್ರಾಮಗಳಲ್ಲಿ ಫೆಬ್ರವರಿ 2001 ರಿಂದ ಬದಲಿ ಪಡಿತರ ವ್ಯವಸ್ಥೆ ಮಾಡಲಾಗಿದೆ. ಹಾಗೂ ಈ ಗ್ರಾಮಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ತೆಗೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.